# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಸಿಡಿ-1509/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 25/03/2019.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಸರ್ವೆ ನಂ. 43, 44 ಮತ್ತು 47ರ ಜಮೀನುಗಳಲ್ಲಿ ಅತಿಕ್ರಮಿಸಿರುವ ಅತಿಕ್ರಮಣವನ್ನು ಶೀಘ್ರವಾಗಿ ತೆರೆವುಗೊಳಿಸಿ ನಿಯಮಾನುಸಾರ ಕ್ರಮ ಜರುಗಿಸಿ ಸರ್ಕಾರಿ ಜಮೀನನ್ನು ರಕ್ಷಿಸುವ ಸಂಬಂಧ ಅಗತ್ಯ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ರಾಚಯ್ಯ ಬಿನ್ ಸಿದ್ದಯ್ಯ, ಅಂಬೇಡ್ಕರ್ ನಗರ, ಬಂಡಿಪಾಳ್ಯ, ಬೊಮ್ಮನಹಳ್ಳಿ ಅಂಚೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು ಸಲ್ಲಿಸಿ, (1) ಗ್ರಾಮ ಲೆಕ್ಕಾಧಿಕಾರಿಗಳು, ಕಂದಾಯ ಇಲಾಖೆ, ವಾರ್ಡ್ ನಂ. 190, ಬೆಂಗಳೂರು ಮತ್ತು, (2) ರಾಜಸ್ವ ನಿರೀಕ್ಷಕರು, ಕಂದಾಯ ಇಲಾಖೆ, ವಾರ್ಡ್ ನಂ. 190, ಬೆಂಗಳೂರು (ಇನ್ನು ಮುಂದೆ '1ನೇ ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ತನಿಖೆಯಲ್ಲಿ (3) ಎಸ್.ಎಂ.ಶಿವಕುಮಾರ್, ಹಿಂದಿನ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಹಾಲಿ ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ (ಇನ್ನು ಮುಂದೆ '3ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರನ್ನು 3ನೇ ಎದುರುದಾರರನ್ನಾಗಿ ಸೇರಿಸಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ:

"ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಹೊಂಗಸಂದ್ರ ಗ್ರಾಮದ ಸರ್ವೆ ನಂಬರ್ 43, 44, 47ರ ಭೂಮಿಗಳು ಮೂಲತಃ ಸರ್ಕಾರಿ ಭೂಮಿಗಳಾಗಿರುತ್ತದೆ. ಸರ್ವೆ

ನಂಬರ್ 43ರಲ್ಲಿ ಸುಮಾರು 1 ಎಕರೆ 20 ಗುಂಟೆ ಭೂಮಿಯನ್ನು ಸ್ಥಳೀಯರು ಅಕ್ರಮವಾಗಿ ಕಬಳಿಸಿದ್ದಾರೆ. ಈ ಬಗ್ಗೆ ತಹಶೀಲ್ದಾರ್‌ರಿಗೆ ಲಿಖಿತವಾದ ದೂರನ್ನು ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಸರ್ವೇ ನಂಬರ್ 44ರ ಸರ್ಕಾರಿ ಭೂಮಿಯನ್ನು ಕೆಲವರು ಮಾರಾಟ ಮಾಡಿರುತ್ತಾರೆ. ಆಶ್ರಯ ಯೋಜನೆಗೆಂದು ಮೀಸಲಿಟ್ಟ ಜಾಗವನ್ನು ರಾತ್ರೋರಾತ್ರಿ ಕೆಲವರು ಮನೆಗಳನ್ನು ಕಟ್ಟಿರುತ್ತಾರೆ. ಸರ್ವೇ ನಂಬರ್ 47ರ ಸರ್ಕಾರಿ ಭೂಮಿಯಲ್ಲೂ ಭೂಕಬಳಿಸಲು ಯತ್ನಿಸುತ್ತಿದ್ದಾರೆ. ಮನೆಗಳನ್ನು ಕಟ್ಟಿಸುವ ಸಲುವಾಗಿ ಭೂಗಳ್ಳರು ಹುನ್ನಾರ ನಡೆಸುತ್ತಿದ್ದು, ಅಕ್ರಮವಾಗಿ ಕಬಳಿಸುವುದನ್ನು ತಡೆದು ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಬೇಕೆಂದು'' ಕೋರಿ ದೂರನ್ನು ಸಲ್ಲಿಸಿರುತ್ತಾರೆ.

ದೂರಿನೊಂದಿಗೆ ದಾಖಲೆಗಳನ್ನು ಲಗತ್ತಿಸಿ ಸದರಿ ಸರ್ಕಾರಿ ಜಮೀನುಗಳಲ್ಲಿ ಆಗುತ್ತಿರುವ ಅಕ್ರಮವನ್ನು ತಡೆದು ಸದರಿ ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಮೀಸಲಿಡುವಂತೆ ಕರ್ನಾಟಕ ಜನಾಂದೋಲನ ಸಂಘಟನೆಯವರು ನೀಡಿದ ಮನವಿ ಪತ್ರಗಳ ಪ್ರತಿಯನ್ನು ಲಗತ್ತಿಸಿರುತ್ತಾರೆ.

3. ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ಇವರ ತನಿಖಾ ವರದಿ ದಿನಾಂಕ: 16/12/2015:

''ಯೊಂಗಸಂದ್ರ ಗ್ರಾಮದ ಸರ್ವೆ ನಂ. 43ರಲ್ಲಿ 28-02 ಎ/ಗುಂ ಸರ್ಕಾರಿ ಗೋಮಾಳದ ಜಮೀನಿದ್ದು ವಾಸದ ಮನೆಗಳನ್ನು ನಿರ್ಮಾಣ ಮಾಡಿರುತ್ತಾರೆ. ಸರ್ವೆ ನಂ. 44ರಲ್ಲಿ 38-20 ಎ/ಗುಂ ಜಮೀನಿದ್ದು 4-00 ಎಕರೆ ಜಮೀನನ್ನು ಬೀದಿ ಮಕ್ಕಳ ಪುನರ್ ವಸತಿಗಾಗಿ, 2-20 ಎ/ಗುಂ ಆಶ್ರಯ ಯೋಜನೆಗಾಗಿ, 0-20 ಗುಂಟೆ ಆಸ್ಪತ್ರೆಗಾಗಿ, ಉಳಿದ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸಿರುತ್ತಾರೆ. ಸರ್ವೆ ನಂ. 47ರಲ್ಲಿ 9-31 ಎ/ಗುಂ ಸರ್ಕಾರಿ ಜಮೀನಿದ್ದು ಮುಸ್ಲಿಂ ಸ್ಮಶಾನಕ್ಕಾಗಿ 3-00 ಎಕರೆ, ಹಿಂದೂ ಸ್ಮಶಾನಕ್ಕಾಗಿ 5-00 ಎಕರೆ, ಕ್ರಿಶ್ಚಿಯನ್ ಸ್ಮಶಾನಕ್ಕಾಗಿ 0-30 ಗುಂಟೆ, ದೇವಸ್ಥಾನಕ್ಕಾಗಿ 0-02 ಗುಂಟೆ ಮತ್ತು ಕೆ.ಧಾಮೋಧರರೆಡ್ಡಿ ರವರ ಹೆಸರಿನಲ್ಲಿ 1-00 ಎಕರೆ ಇರುತ್ತದೆ.

ಮೇಲ್ಕಂಡ ಸರ್ವೆ ನಂಬರ್‌ಗಳಲ್ಲಿ ಅಕ್ರಮವಾಗಿ ಮನೆ ನಿರ್ಮಿಸಿದ ಕೆಲವರ ಬಳಿ ಹಕ್ಕುಪತ್ರ ಇದ್ದು ಮತ್ತು ಉಳಿದವರ ಬಳಿ ಯಾವುದೇ ದಾಖಲೆ ಇರುವುದಿಲ್ಲ. ಆದಕಾರಣ ಈ ಅಕ್ರಮ

ಒತ್ತುವರಿದಾರರ ವಿರುದ್ಧ ತೆರವುಗೊಳಿಸುವ ಕ್ರಮ ಕೈಗೊಳ್ಳಲು ನಿಖರವಾದ ಸ್ಕೆಚ್ ಅಗತ್ಯವಿರುತ್ತದೆ. ಆದ್ದರಿಂದ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ರವರಲ್ಲಿ ತುರ್ತಾಗಿ ಸ್ಕೆಚ್ ತಯಾರಿಸಿ ವರದಿ ನೀಡುವಂತೆ ಸೂಚಿಸಲಾಗಿರುತ್ತದೆ'' ಎಂದು ನಮೂದಿಸಿರುತ್ತಾರೆ. ಜಿಲ್ಲಾಧಿಕಾರಿಗಳು ವರದಿಯೊಂದಿಗೆ ತಹಶೀಲ್ದಾರರ ವರದಿ ಪ್ರತಿಗಳನ್ನು ಲಗತ್ತಿಸಿರುತ್ತಾರೆ.

4. ಜಿಲ್ಲಾಧಿಕಾರಿಗಳ ವರದಿ ದಿನಾಂಕ: 04/04/2017:

"ಬೇಗೂರು ಹೋಬಳಿ ಹೊಂಗಸಂದ್ರ ಗ್ರಾಮದ ಸರ್ವೆ ನಂ. 43ರಲ್ಲಿ 43-03.12 ಎ/ಗುಂ ಖರಾಬು 28-02 ಎ/ಗುಂ ಉಳಿಕೆ 15-01.12 ಎ/ಗುಂ ವಿಸ್ತೀರ್ಣಕ್ಕೆ ಆರ್.ಟಿ.ಸಿ., ಬರುತ್ತಿರುತ್ತದೆ. ಆಕಾರಬಂದಿನಂತೆ ಪಹಣಿ ತಿದ್ದುಪಡಿ ಮಾಡುವ ಅವಶ್ಯಕತೆ ಇರುತ್ತದೆ ಹಾಗೂ ಆಕಾರಬಂದಿನಂತೆ ಇರುವ 24-02 ಎ/ಗುಂ ವಿಸ್ತೀರ್ಣದ ಜಾಗವನ್ನು ಪರಿಶೀಲಿಸಲಾಗಿ 0-24 ಗುಂಟೆ ಪ್ರದೇಶವು ಬಿ.ಎಂ.ಟಿ.ಎಫ್/ಎಸ್.ಪಿ/ಜಿ.ಎಲ್/38/2016 ರಂತೆ ಪ್ರಕರಣ ದಾಖಲಾಗಿರುತ್ತದೆ. ಇದರಂತೆ ಸ್ಥಳ ತನಿಖೆ ಮಾಡಲಾಗಿ 0-24 ಗುಂಟೆ ಜಮೀನಿನಲ್ಲಿ ಮುನಿತಿರುಮಲ್ಲಪ್ಪ ಎಂಬುವವರು ಅನುಭವದಲ್ಲಿದ್ದು, ಸುಮಾರು 10 ಶೀಟಿನ ಮನೆ, 1 ಆರ್.ಸಿ.ಸಿ. ಕಟ್ಟಡವಿದ್ದು ಉಳಿಕೆ ಸ್ವತ್ತಿನಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ವಾಹನ ನಿಲುಗಡೆ ಮಾಡಿರುವುದು ಕಂಡುಬಂದಿರುತ್ತದೆ.

ಬ್ಲಾಕ್-2ರಲ್ಲಿ ತೋರಿಸಿರುವ ಜಮೀನು ಶ್ರೀ ಗುರುಸ್ವಾಮಿ ಬಿನ್ ಲೇಟ್ ಚಿಕ್ಕಮುನಿಯಪ್ಪ ರವರ ಹೆಸರಿನಲ್ಲಿ 2-00 ಎಕರೆ ವಿಸ್ತೀರ್ಣ ಹಾಗೂ ವಿ.ಮುನಿಯಪ್ಪ ಬಿನ್ ಈರಪ್ಪ ರವರ ಹೆಸರಿನಲ್ಲಿ 0-09.12 ಗುಂಟೆ ವಿಸ್ತೀರ್ಣಕ್ಕೆ ಪಹಣಿ ದಾಖಲು ಬರುತ್ತಿದ್ದು, ಇವರುಗಳು ಅನುಭವದಲ್ಲಿದ್ದು ಜಮೀನು ಖಾಲಿ ಇರುತ್ತದೆ.

ಬ್ಲಾಕ್ 3ರಲ್ಲಿ ತೋರಿಸಿರುವ 12-31 ಎ/ಗುಂಟೆ ಪ್ರದೇಶಕ್ಕೆ ಚಾಲ್ತಿ ಸಾಲಿನ ಪಹಣಿಯಲ್ಲಿ ಹೆಸರು ಮತ್ತು ವಿಸ್ತೀರ್ಣ ನಮೂದಾಗಿರುತ್ತದೆ. ಈ ಸ್ಥಳಗಳಲ್ಲಿ ಬಡಾವಣೆಗಳು ನಿರ್ಮಾಣವಾಗಿರುವುದರಿಂದ ಅನುಭವಗಳ ಬಗ್ಗೆ ನಿಖರವಾಗಿ ಮಾಹಿತಿ ತಿಳಿದು ಬಂದಿರುವುದಿಲ್ಲ ಮತ್ತು ಈ ಸರ್ವೆ ನಂಬರ್‌ನ ಉಳಿಕೆ 8-7.04 ಎ/ಗುಂ ಪ್ರದೇಶದಲ್ಲಿ ಅನಧಿಕೃತ ಮನೆಗಳು ನಿರ್ಮಾಣವಾಗಿದ್ದು 94ಸಿ ರಡಿಯಲ್ಲಿ ಹಕ್ಕುಪತ್ರ ನೀಡಲಾಗಿರುತ್ತದೆ ಹಾಗೂ ಸುಮಾರು 172 ಅರ್ಜಿ 94 ಸಿಸಿ ರಡಿ ಅರ್ಜಿಗಳು ಬಂದಿದ್ದು ವಿಲೇವಾರಿಗೆ ಬಾಕಿ ಇರುತ್ತವೆ.

ಹೊಂಗಸಂದ್ರ ಗ್ರಾಮದ ಸರ್ವೆ ನಂ. 44ರಲ್ಲಿ ಪಹಣಿಯಂತೆ 35-20 ಎ/ಗುಂ ವಿಸ್ತೀರ್ಣ ದಾಖಲಿಸಿದ್ದು, ಆಕಾರಬಂದಿನಂತೆ 22-08 ಎ/ಗುಂ ದಾಖಲಿದ್ದು ಪಹಣಿಯಲ್ಲಿ ತಿದ್ದುಪಡಿಯಾಗಬೇಕಾಗಿರುತ್ತದೆ. ಮೋಜಣಿದಾರರು ನೀಡಿರುವ ನಕಾಶೆಯಂತೆ ಬ್ಲಾಕ್-1 ರಲ್ಲಿ ಇರುವ 1-20 ಎ/ಗುಂ ವಿಸ್ತೀರ್ಣವು ಸರ್ಕಾರಿ ಪ್ರಾಥಮಿಕ ಪಾಠಶಾಲೆ ಪ್ರದೇಶವಾಗಿದ್ದು ಈ ಜಮೀನಿಗೆ ಪ್ರಸ್ತಾವನ ಸಲ್ಲಿಸಬೇಕಾಗಿರುತ್ತದೆ. ಬ್ಲಾಕ್-2 ರಲ್ಲಿ ಇರುವ 2-00 ಎಕರೆ ಪ್ರದೇಶವು ಮುನಿಯಪ್ಪ ಬಿನ್ ಯಲ್ಲಪ್ಪ ಮತ್ತು ಮಂಜುನಾಥ್ ಬಿನ್ ಚಿಕ್ಕಪಾಪಯ್ಯ ರವರು ಅನುಭವದಲ್ಲಿದ್ದು, ಪಹಣಿಯಲ್ಲಿ ಹೆಸರು ಮತ್ತು ವಿಸ್ತೀರ್ಣ ನಮೂದಾಗಿರುತ್ತದೆ. ಬ್ಲಾಕ್-3 ರಲ್ಲಿ 7-17 ಎ/ಗುಂ ಪ್ರದೇಶವಿದ್ದು ಇದರ ಪೈಕಿ ಆಸ್ಪತ್ರೆಗೆ 0-20 ಗುಂಟೆ ಸಮುದಾಯ ಭವನಕ್ಕೆ 0-17 ಗುಂಟೆ, ವಸತಿ ಹೀನರ ಆಶ್ರಯ ಯೋಜನೆಗೆ 2-20 ಎ/ಗುಂ ಹಾಗೂ ಬೀದಿ ಮಕ್ಕಳ ಪುನರವಸತಿ ಹಾಗೂ ಅಂಗವಿಕಲರ ಪ್ರದೇಶವಾಗಿದ್ದು, ಈ ಪ್ರದೇಶದಲ್ಲಿ ನೀರು ನಿಂತು ಕಟ್ಟೆ ಇದ್ದು, ಅಲ್ಲಲ್ಲಿ ಅನಧಿಕೃತ ಗುಡಿಸಲು, ಶೀಟಿನ ಮನೆಗಳು ಇರುತ್ತವೆ. ಬ್ಲಾಕ್ ನಂ 04ರಲ್ಲಿ ಇರುವ 11-11 ಎ/ಗುಂ ವಿಸ್ತೀರ್ಣ ಪ್ರದೇಶದ ಪೈಕಿ 4-00 ಎಕರೆ ವಿಸ್ತೀರ್ಣದಲ್ಲಿ ಸಂಪಂಗಿ ಬಿನ್ ಕುಳ್ಳಪ್ಪ ಇತರರು (ಬಾಟಿ) ಹಾಗೂ ಸಿ.ಆರ್.ಚಂದ್ರಶೇಖರ್ ಬಿನ್ ಕೆ.ರಾಮಯ್ಯ ರವರ ಹೆಸರು ಮತ್ತು ವಿಸ್ತೀರ್ಣ ಪಹಣಿಯಲ್ಲಿ ನಮೂದಾಗಿರುತ್ತದೆ. ಉಳಿಕೆ 7-11 ಎ/ಗುಂ ಪ್ರದೇಶದಲ್ಲಿ ಅನಧಿಕೃತ ಮನೆಗಳು ನಿರ್ಮಾಣಗೊಂಡಿದ್ದು ಸಾರ್ವಜನಿಕ ರಸ್ತೆ ಮತ್ತು ಹಳ್ಳ ಪ್ರದೇಶವಿರುತ್ತದೆ. ಈ ಜಮೀನಿಗೆ 94ಸಿ ರಡಿಯಲ್ಲಿ ಹಕ್ಕು ಪತ್ರ ನೀಡಲಾಗಿರುತ್ತದೆ ಹಾಗೂ ಸುಮಾರು 353 ಅರ್ಜಿಗಳು 94ಸಿಸಿ ರಡಿಯಲ್ಲಿ ಅರ್ಜಿ ಸಲ್ಲಿಸಿದ್ದು ವಿಲೇವಾರಿಗೆ ಬಾಕಿ ಇರುತ್ತದೆ.

ಹೊಂಗಸಂದ್ರ ಗ್ರಾಮದ ಸರ್ವೆ ನಂ. 47ರಲ್ಲಿ ಆಕಾರಬಂದಿನಂತೆ 9-38 ಎ/ಗುಂ ವಿಸ್ತೀರ್ಣವಿದ್ದು, ಬ್ಲಾಕ್-1 ರಂತೆ 3-00 ಎಕರೆ ವಿಸ್ತೀರ್ಣವು ಮುಸ್ಲಿಂ ಜನಾಂಗದ ಸ್ಮಶಾನಕ್ಕಾಗಿ, ಬ್ಲಾಕ್-2 ರಂತೆ 4-00 ಎಕರೆ ವಿಸ್ತೀರ್ಣವು ಹಿಂದೂ ಜನಾಂಗದ ಸ್ಮಶಾನಕ್ಕಾಗಿ, ಬ್ಲಾಕ್-3 ರಂತೆ 0-30 ಗುಂಟೆ ವಿಸ್ತೀರ್ಣವು ಕ್ರಿಶ್ಚಿಯನ್ ಜನಾಂಗದ ಸ್ಮಶಾನಕ್ಕಾಗಿ ಕಾಯ್ದಿರಿಸಿದ್ದು, ಪಹಣಿಯಲ್ಲಿ ನೊಂದಣಿ ಬರುತ್ತಿರುತ್ತದೆ. 0-38 ಗುಂಟೆ ಪ್ರದೇಶದಲ್ಲಿ ಅನಧಿಕೃತ ಮನೆಗಳು ಮತ್ತು ರಸ್ತೆ ಇರುವ ಪ್ರದೇಶವಾಗಿರುತ್ತದೆ. ಬ್ಲಾಕ್-4 ರಂತೆ 1-10 ಎ/ಗುಂ ಜಮೀನು ಬಂಡೆ ಹೊಡೆದು ಹಳ್ಳವಾಗಿರುವ ಮತ್ತು ಖಾಲಿ ಇರುವ ಪ್ರದೇಶವಾಗಿರುತ್ತದೆ'' ಎಂದು ನಮೂದಿಸಿರುತ್ತಾರೆ.

ಜಿಲ್ಲಾಧಿಕಾರಿಗಳು ವರದಿಯೊಂದಿಗೆ ತಹಶೀಲ್ದಾರ್‌ರ ವರದಿ ಪ್ರತಿ, ರಾಜಸ್ವ ನಿರೀಕ್ಷಕರ ವರದಿ ಪ್ರತಿ, ಸರ್ವೆ ನಂ. 43, 44 ಮತ್ತು 47ರ ಕಚ್ಛಾ ನಕ್ಷೆ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

5. ಜಿಲ್ಲಾಧಿಕಾರಿಗಳ ವರದಿ ಮತ್ತು ಲಗತ್ತು ದಾಖಲೆಗಳ ಆಧಾರದಿಂದ ಸರ್ವೆ ನಂ. 43, 44, 47ರ ಸರ್ಕಾರಿ ಜಮೀನುಗಳಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿರುವುದು ಕಂಡುಬಂದಿರುತ್ತದೆ.

6. 2013 ರಿಂದ ಫಿರ್ಯಾದುದಾರರು ಹಾಗೂ ಕರ್ನಾಟಕ ಜನಾಂದೋಲನ ಸಂಘದವರು ಸರ್ಕಾರಿ ಭೂಕಬಳಿಕೆದಾರರ ವಿರುದ್ಧ ಕ್ರಮ ತೆಗೆದುಕೊಳ್ಳಲು ಮನವಿ ಪತ್ರಗಳನ್ನು ಕೊಟ್ಟಿದ್ದರೂ ಈವರೆಗೂ ಯಾವುದೇ ಕ್ರಮ ಜರುಗಿಸಿ ಸರ್ಕಾರಿ ಸ್ವತ್ತನ್ನು ರಕ್ಷಿಸಿದ ಬಗ್ಗೆ ರಾಜಸ್ವ ನಿರೀಕ್ಷಕರ ವರದಿಯಲ್ಲಾಗಲೀ, ತಹಶೀಲ್ದಾರ್‌ರವರ ವರದಿಯಲ್ಲಾಗಲೀ ಮಾಹಿತಿ ಲಭ್ಯವಿರುವುದಿಲ್ಲ.

7. 2013 ರಿಂದ 2017 ರವರೆಗೆ ಕರ್ತವ್ಯ ನಿರ್ವಹಿಸಿದ ಹೊಂಗಸಂದ್ರ ಗ್ರಾಮದ ಸರ್ವೇ ನಂ.43, 44 ಮತ್ತು 47ರ ಜಮೀನುಗಳ ವ್ಯಾಪ್ತಿಯನ್ನು ಹೊಂದಿರುವ ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್‌ರವರ ಹೆಸರು, ವಿಳಾಸಗಳನ್ನು ಪಡೆಯಲು ಕ್ರಮ ಜರುಗಿಸಲಾಗಿರುತ್ತದೆ.

8. ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರು ತಮ್ಮ ಪತ್ರ ದಿನಾಂಕ 17/11/2017 ರಲ್ಲಿ "ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರು ವರದಿ ನೀಡಿದ್ದು, ತಹಶೀಲ್ದಾರ್‌ರಾಗಿ ಕರ್ತವ್ಯ ನಿರ್ವಹಿಸಿದವರ ಹೆಸರು ಎಸ್.ಎಂ. ಶಿವಕುಮಾರ್, ದೂರವಾಣಿ ಸಂ:9980017403, ಪ್ರಸ್ತುತ ಕಛೇರಿ ವಿಳಾಸ, ಮುನ್ಸಿಪಲ್ ತಹಶೀಲ್ದಾರ್, ಮಂಡ್ಯ ಇದ್ದು, ದಿನಾಂಕ 20/09/2017 ರಂದು ವರ್ಗಾವಣೆಯಾಗಿರುತ್ತಾರೆಂದು" ತಿಳಿಸಿರುತ್ತಾರೆ.

9. 3ನೇ ಎದುರುದಾರರ ಆಕ್ಷೇಪಣೆಗಳು:-

"ದಿನಾಂಕ: 30/12/2015 ರಂದು ಬೆಂಗಳೂರು ದಕ್ಷಿಣ ತಾಲ್ಲೂಕು ಕಛೇರಿಯ ತಹಶೀಲ್ದಾರ್ ಹುದ್ದೆಗೆ ವರದಿ ಮಾಡಿಕೊಂಡಿರುತ್ತೇನೆ. ದಿನಾಂಕ: 07/01/2016 ರಂದು ಸದರಿ ದೂರಿನ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ವರದಿ ನೀಡಬೇಕೆಂದು ರಾಜಸ್ವ ನಿರೀಕ್ಷಕರಿಗೆ ಮತ್ತು ಭೂಮಾಪಕರಿಗೆ ಜ್ಞಾಪನ ನೀಡಿರುತ್ತೇನೆ. ದಿನಾಂಕ: 24/02/2016 ರಂದು ಜಂಟಿ ಆಯುಕ್ತರು,

ಬಿ.ಬಿ.ಎಂ.ಪಿ., ಬೊಮ್ಮನಹಳ್ಳಿ ವಲಯ, ಬೆಂಗಳೂರು ರವರಿಗೆ ಪತ್ರ ಮುಖೇನ ಹೊಂಗಸಂದ್ರ ಗ್ರಾಮದ ಸರ್ವೆ ನಂ. 47, 43, 44ರ ಜಮೀನಿನಲ್ಲಿ ಅನಧಿಕೃತವಾಗಿ ಮನೆಗಳನ್ನು ಕಟ್ಟುತ್ತಿರುವುದನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆದು ತಂತಿಬೇಲಿ ನಿರ್ಮಿಸಲು ಕೋರಲಾಗಿರುತ್ತದೆ. ಮನೆಗಳನ್ನು ನಿರ್ಮಿಸುತ್ತಿರುವವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಲು ದಿನಾಂಕ: 02/12/2013 ರಂದು ಪೊಲೀಸ್ ಠಾಣೆಗೆ ಮಡಿವಾಳದಲ್ಲಿ ದೂರು ದಾಖಲಿಸಿ ಶೆಡ್‌ಗಳನ್ನು ತೆರವುಗೊಳಿಸಲಾಗಿರುತ್ತದೆ. ದಿನಾಂಕ: 30/05/2016 ರಂದು ಸರ್ವೆ ಸೂಪರ್‌ವೈಸರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ಅಳತೆ ಕಾರ್ಯ ನಿರ್ವಹಿಸಿ ವರದಿ ನೀಡಲಾಗಿರುವುದಿಲ್ಲವೆಂದು ಕಾರಣ ಕೇಳಿ ನೋಟಿಸ್ ನೀಡಲಾಗಿರುತ್ತದೆ. ಅಳತೆ ಕಾರ್ಯ ವಿಳಂಬವಾಗಿದ್ದು ಸರ್ವೆ ಇಲಾಖೆ ಅಧಿಕಾರಿಗಳು ಕಾರಣರಾಗಿರುತ್ತಾರೆ.

ದಿನಾಂಕ: 03/08/2016 ರಂದು ಮತ್ತೊಮ್ಮೆ ಭೂ ದಾಖಲೆಗಳ ಜಂಟಿ ನಿರ್ದೇಶಕರಿಗೆ ಮತ್ತೊಮ್ಮೆ ಪತ್ರ ಬರೆದು ಜಮೀನಿನ ಅಳತೆ ಕಾರ್ಯಕ್ಕೆ ಭೂಮಾಪಕರನ್ನು ನಿಯೋಜಿಸುವಂತೆ ಕೋರಲಾಗಿದೆ. ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 94ಸಿ ರಡಿ ಮನೆಗಳು ಮಂಜೂರಾಗಿದ್ದು, ಕೆಲವರಿಗೆ ಹಕ್ಕುಪತ್ರ ನೀಡಿರುವುದಾಗಿದೆ. ಸರ್ವೆಪರ್ಯಾವೇಕ್ಷಕರಿಂದ ನಕ್ಷೆ ಸ್ವೀಕೃತವಾಗಿರುವುದಿಲ್ಲವೆಂದು ಜಿಲ್ಲಾಧಿಕಾರಿಗಳಿಗೆ ಪತ್ರ ಸಲ್ಲಿಸಲಾಗಿರುತ್ತದೆ. ದಿನಾಂಕ: 01/02/2017 ರಂದು ಮತ್ತೊಮ್ಮೆ ನೆನಪೋಲೆಯನ್ನು ಸರ್ವೆ ಪರ್ಯಾವೇಕ್ಷಕರಿಗೆ ನೀಡಿದ್ದು, ದಿನಾಂಕ: 20/02/2017 ರಂದು ಸರ್ವೆ ನಕ್ಷೆ ವರದಿ ಮತ್ತು ರಾಜಸ್ವ ನಿರೀಕ್ಷಕರ ವರದಿಯನ್ನು ತಾಲ್ಲೂಕು ಕಛೇರಿಗೆ ಸಲ್ಲಿಸಿರುತ್ತಾರೆ. ದಿನಾಂಕ: 08/03/2017 ರಂದು ಸರ್ವೆ ನಕ್ಷೆ ವರದಿ ಮತ್ತು ರಾಜಸ್ವ ನಿರೀಕ್ಷಕರ ವರದಿಯನ್ನಾಧರಿಸಿ ಜಮೀನು ಖುಲ್ಲಾಪಡಿಸಿ, ಸದರಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದ್ದು, ಸರ್ಕಾರದ ಆದೇಶದಂತೆ 94 ಸಿಸಿ ರಡಿಯಲ್ಲಿ ವಾಸದ ಮನೆ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿರುವವರನ್ನು ತೆರವುಗೊಳಿಸಿರುವುದಿಲ್ಲ. ಅನಧಿಕೃತ ಒತ್ತುವರಿದಾರರಿಗೆ ಮಾನ್ಯ ಭೂಕಬಳಿಕೆ ವಿಶೇಷ ನ್ಯಾಯಾಲಯದಲ್ಲಿ ಎಲ್.ಜಿ.ಸಿ. 203, 204 ಮತ್ತು 205/2017 ರಂತೆ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ" ಎಂದು ನಮೂದಿಸಿರುತ್ತಾರೆ.

ಹೊಂಗಸಂದ್ರ ಗ್ರಾಮದ ಸರ್ವೆ ನಂ. 43ರ ಜಮೀನಿನ ನಕ್ಷೆ ಪ್ರತಿಯನ್ನು ತಾಲ್ಲೂಕು ಭೂಮಾಪಕರು ತಯಾರಿಸಿದ್ದು ಪರಿಶೀಲಿಸಲಾಗಿ "0.24 ಗುಂಟೆ ಪ್ರದೇಶದ ಬಗ್ಗೆ ಬಿ.ಎಂ.ಟಿ.ಎಫ್.,ನಲ್ಲಿ ದೂರು ದಾಖಲಾಗಿದ್ದು ಅನುಭವದಾರರ ಹೆಸರು ತಿಳಿದಿರುವುದಿಲ್ಲ. ಎಕರೆ

2.09 3/4 ಗುಂಟೆ ಜಮೀನು ಗುರುಸ್ವಾಮಿ ರವರ ಅನುಭವದಲ್ಲಿದ್ದು ಪಹಣಿಯಲ್ಲಿ ನಮೂದಾಗಿರುತ್ತದೆ. 12 ಎಕರೆ 31 ಗುಂಟೆ ಪ್ರದೇಶಕ್ಕೆ ಪಹಣಿಯಲ್ಲಿ ನಮೂದಿದ್ದು ಬಡಾವಣೆ ನಿರ್ಮಾಣವಾಗಿದ್ದು ಅನುಭವದಾರರ ಹೆಸರು ತಿಳಿದುಬರುತ್ತಿಲ್ಲ. 8 ಎಕರೆ 17 1/4 ಗುಂಟೆ ಜಮೀನಿನಲ್ಲಿ ಅನಧಿಕೃತ ಕಟ್ಟಡಗಳು ನಿರ್ಮಾಣವಾಗಿ ಒತ್ತುವರಿ ಮಾಡಿರುವುದಾಗಿ ತೋರಿಸಿರುತ್ತಾರೆ. ಸರ್ವೆ ನಂ. 47ರ ಬಾಬ್ತು ನಕ್ಷೆಯಲ್ಲಿ 0.38 ಗುಂಟೆ ಪ್ರದೇಶದಲ್ಲಿ ಅನಧಿಕೃತ ಮನೆಗಳು ಇರುವುದಾಗಿ ನಮೂದಿಸಿರುತ್ತಾರೆ. ಸರ್ವೆ ನಂ. 44ರ ಬಾಬ್ತು ನಕ್ಷೆಯಲ್ಲಿ 2 ಎಕರೆ ಪ್ರದೇಶದಲ್ಲಿ ಮುನಿಯಪ್ಪ ಮತ್ತು ಮಂಜುನಾಥ್ ರವರ ಅನುಭವದಲ್ಲಿದ್ದು ಪಹಣಿಯಲ್ಲಿ ನಮೂದಿರುತ್ತದೆ. ಅಲ್ಲಲ್ಲಿ ಅನಧಿಕೃತ ಶೆಟ್ ಕಟ್ಟಡಗಳು ಇದ್ದು 4 ಎಕರೆ ಜಮೀನು ಸಂಪಂಗಿ, ಸಿ.ಆರ್.ಚಂದ್ರಶೇಖರ್ ರವರ ಹೆಸರು ಪಹಣಿಯಲ್ಲಿರುತ್ತದೆ. 7 ಎಕರೆ 11 ಗುಂಟೆ ಪ್ರದೇಶದಲ್ಲಿ ಅನಧಿಕೃತ ಕಟ್ಟಡಗಳು ಇರುವುದಾಗಿ" ನಮೂದಿಸಿರುತ್ತಾರೆ.

10. ಪ್ರಸ್ತುತ ಪ್ರಕರಣದ ದೂರು ದಿನಾಂಕ: 25/04/2015 ರಂದು, ದಾಖಲಾಗಿದ್ದು ಸರ್ಕಾರಿ ಜಮೀನುಗಳಲ್ಲಿನ ಒತ್ತುವರಿ ತೆರೆವುಗೊಳಿಸುವಂತೆ ಕೋರಿ ಅನೇಕ ಮನವಿ ಪತ್ರಗಳನ್ನು ಸಲ್ಲಿಸಿದ್ದರೂ ತನಿಖಾ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ 3ನೇ ಎದುರುದಾರರು ಸದರಿ ಹುದ್ದೆಯಲ್ಲಿ ದಿನಾಂಕ: 30/12/2015 ರಿಂದ ಕಾರ್ಯನಿರ್ವಹಿಸಿದ್ದರೂ ಒತ್ತುವರಿ ತೆರೆವುಗೊಳಿಸಲು ಸೂಕ್ತ ಕ್ರಮ ಜರುಗಿಸಿರುವುದು ಕಂಡುಬಂದಿರುವುದಿಲ್ಲ.

11. ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 93ರ ರೀತ್ಯಾ ತಹಶೀಲ್ದಾರ್‌ರವರ ಅನುಮತಿ ಇಲ್ಲದೇ ಯಾವುದೇ ವ್ಯಕ್ತಿಯು ಅಕ್ರಮವಾಗಿ ಸರ್ಕಾರಿ ಭೂಮಿಯನ್ನು ಸ್ವಾಧೀನ ಹೊಂದುವಂತಿರುವುದಿಲ್ಲ. ಸದರಿ ಕಾಯ್ದೆಯ ಕಲಂ 94ರ ರೀತ್ಯಾ ಅಂತಹ ಅಕ್ರಮ ಸ್ವಾಧೀನದಾರರ ವಿರುದ್ಧ ಕ್ರಮ ಜರುಗಿಸಿ ದಂಡ ವಿಧಿಸಬೇಕಿದ್ದು, ಈ ರೀತಿ ಕ್ರಮ ಜರುಗಿಸಿದ ಬಗ್ಗೆ ತಹಶೀಲ್ದಾರ್‌ರವರ ವರದಿಯಲ್ಲಿ ಯಾವುದೇ ಮಾಹಿತಿಯು ಲಭ್ಯವಿರುವುದಿಲ್ಲ. ಅಂತಹ ಆಕ್ರಮಣಕಾರರಿಂದ ದಂಡ ವಸೂಲಿ ಮಾಡದೆ ಇರುವುದರಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿರುತ್ತದೆ.

12. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಸರ್ವೆ ನಂ. 43, 44 ಮತ್ತು 47ರ ಜಮೀನುಗಳಲ್ಲಿ ಅತಿಕ್ರಮಿಸಿರುವ ಅತಿಕ್ರಮಣವನ್ನು ಶೀಘ್ರವಾಗಿ ತೆರವುಗೊಳಿಸಿ ನಿಯಮಾನುಸಾರ ಕ್ರಮ ಜರುಗಿಸಿ ಸರ್ಕಾರಿ ಜಮೀನನ್ನು ರಕ್ಷಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

13. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ <u>ಒಂದು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[ನ್ಯಾಯಮೂರ್ತಿ ಎನ್. ಆನಂದ] 26/3
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.